# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IVA | ಬೆಂಗಳೂರು, ಸೋಮವಾರ, ೨೩, ಮಾರ್ಚ್, ೨೦೨೬( ಚೈತ್ರ ,೦೨, ಶಕವರ್ಷ, ೧೯೪೮)<br>BENGALURU, MONDAY, 23, MARCH, 2026( CHAITHRA , 02, SHAKAVARSHA, 1948) | ನಂ. ೨೨೫<br>No. 225 |
|---|---|---|


**ಕರ್ನಾಟಕ ವಿಧಾನಸಭೆ**

**ಹದಿನಾರನೇ ವಿಧಾನಸಭೆ**

**ಒಂಭತ್ತನೇ ಅಧಿವೇಶನ**

**(ಮುಂದುವರೆದ ಉಪವೇಶನ)**

## ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ವಿಧೇಯಕ, 2026

**(2026ರ ವಿಧಾನಸಭೆಯ ವಿಧೇಯಕ ಸಂಖ್ಯೆ–10)**

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2020ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2020 (2020ರ ಕರ್ನಾಟಕ ಅಧಿನಿಯಮ 04)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ಅಧಿನಿಯಮ, 2026 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ಪ್ರಕರಣ 2ರ ತಿದ್ದುಪಡಿ.-** ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2020 (2020ರ ಕರ್ನಾಟಕ ಅಧಿನಿಯಮ 04)ರ (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ), 2ನೇ ಪ್ರಕರಣದಲ್ಲಿ,-

(i) ಖಂಡ(ಸಿಎ)ಯನ್ನು (ಸಿಬಿ) ಎಂದು ಮರುಸಂಖ್ಯೆ ನೀಡತಕ್ಕದ್ದು;

(ii) ಹಾಗೆ ಮರುಸಂಖ್ಯೆ ನೀಡಲಾದ ಖಂಡ(ಸಿಬಿ)ಯ ಮೊದಲು ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ: -

"(ಸಿಎ) "ನಿರ್ಣಾಯಕ ಹುದ್ದೆಗಳು" ಎಂದರೆ ಮತ್ತು ಪದವಿ-ಪೂರ್ವ ಕಾಲೇಜಿನ ಉಪನ್ಯಾಸಕರನ್ನೊಳಗೊಂಡಂತೆ ಈ ಮುಂದಿನ ಪ್ರವರ್ಗಗಳ ಎಲ್ಲಾ ಬೋಧಕ ಹುದ್ದೆಗಳನ್ನು ಒಳಗೊಳ್ಳುವುದು, ಎಂದರೆ:-

(i) **ಪ್ರವರ್ಗ 1:** ಮುಖ್ಯೋಪಾಧ್ಯಾಯರು ಅಥವಾ ಉಪ ಪ್ರಾಂಶುಪಾಲರನ್ನು ಹೊರತುಪಡಿಸಿ ಕರ್ನಾಟಕ ಪಬ್ಲಿಕ್ ಶಾಲೆಗಳು, ಆದರ್ಶ ವಿದ್ಯಾಲಯ, ಪಿಎಂ ಶ್ರೀ ಶಾಲೆಗಳು;

(ii) **ಪ್ರವರ್ಗ 2:** ಮುಖ್ಯೋಪಾಧ್ಯಾಯರು ಅಥವಾ ಉಪ ಪ್ರಾಂಶುಪಾಲರನ್ನು ಹೊರತುಪಡಿಸಿ, 250 ವಿದ್ಯಾರ್ಥಿಗಳನ್ನು ಮೀರಿದ ಅಥವಾ ಕಾಲಕಾಲಕ್ಕೆ ಸರ್ಕಾರವು ಅಧಿಸೂಚಿಸಲಾದ ದಾಖಲಾತಿ ಮಿತಿಯ ಪ್ರಕಾರ ದಾಖಲಾತಿಯನ್ನು ಹೊಂದಿರುವ ಎಲ್ಲಾ ಇತರ ಶಾಲೆಗಳು ಹಾಗೂ ಸರ್ಕಾರಿ ಪದವಿ-ಪೂರ್ವ ಕಾಲೇಜುಗಳು ; ಮತ್ತು

(iii) **ಪ್ರವರ್ಗ 3:** ಪ್ರವರ್ಗ 1 ಮತ್ತು 2ರಲ್ಲಿನ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರು ಅಥವಾ ಉಪ ಪ್ರಾಂಶುಪಾಲರು ಅಥವಾ ಸರ್ಕಾರಿ ಪದವಿ-ಪೂರ್ವ ಕಾಲೇಜುಗಳ ಪ್ರಾಂಶುಪಾಲರು."

(iii) (ಡಿ)ಖಂಡದ ಕೊನೆಯಲ್ಲಿ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ :-

"ಪರಂತು, ಅನುಸೂಚಿ-I ರ IIIನೇ ಕ್ರಮ ಸಂಖ್ಯೆಯಲ್ಲಿ ನಿರ್ದಿಷ್ಟ ಪಡಿಸಿದ ಹುದ್ದೆಗಳ ವರ್ಗಾವಣೆಯನ್ನು ಕೌನ್ಸಿಲಿಂಗ್‌ನ ಮೂಲಕ ಮಾತ್ರ ನಡೆಸತಕ್ಕದ್ದು, ಅದಕ್ಕಾಗಿ ಶಾಲೆಗಳು/ಕಾಲೇಜುಗಳಲ್ಲಿನ ಸ್ಥಾನಿಕ(incumbent) ಪ್ರಸ್ತುತ ವೃಂದದಲ್ಲಿ ಸಲ್ಲಿಸಿರುವ ಕನಿಷ್ಠ ಸೇವಾವಧಿಯು ಹನ್ನೆರಡು ನಿರಂತರ ವರ್ಷಗಳಾಗಿರತಕ್ಕದ್ದು:"

ಮತ್ತು ಪರಂತು ಅನುಸೂಚಿ-I ರ IIIನೇ ಕ್ರಮ ಸಂಖ್ಯೆಯಲ್ಲಿ ನಿರ್ದಿಷ್ಟ ಪಡಿಸಿದ ಹುದ್ದೆಗಳಲ್ಲಿನ ಕನಿಷ್ಠ ಸೇವಾವಧಿಯು ಮೂರು ವರ್ಷಗಳು ಮಾತ್ರ ಆಗಿರತಕ್ಕದ್ದು:

ಅಲ್ಲದೆ ಪರಂತು ಅನುಸೂಚಿ-Iರಲ್ಲಿ ಮತ್ತು 2ನೇ ಪ್ರಕರಣದ (ಎಚ್) ಖಂಡದಲ್ಲಿ ನಿರ್ದಿಷ್ಟಪಡಿಸಿದ ಬೋಧಕ ಹುದ್ದೆಗಳ ಸ್ಥಾನಿಕರನ್ನು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯಲ್ಲಿನ ಬೋಧಕೇತರ ಹುದ್ದೆಗಳಿಗೆ ಮತ್ತು ರಾಜ್ಯ ಸಿವಿಲ್ ಸೇವೆಗಳು ಅಥವಾ ಮಂಡಳಿಗಳು ಅಥವಾ ನಿಗಮಗಳಲ್ಲಿನ ಯಾವುದೇ ಇತರ ಹುದ್ದೆಗಳಿಗೆ ವರ್ಗಾವಣೆ ಮಾಡತಕ್ಕದ್ದಲ್ಲ."

**3. ಪ್ರಕರಣ 4ರ ತಿದ್ದುಪಡಿ.-** ಮೂಲ ಅಧಿನಿಯಮದ, 4ನೇ ಪ್ರಕರಣದ, (2)ನೇ ಉಪ-ಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ :-

"(3) ಈ ಪ್ರಕ್ರಿಯೆಯಡಿಯಲ್ಲಿನ ಎಲ್ಲಾ ವರ್ಗಾವಣೆಗಳು, 2ನೇ ಪ್ರಕರಣದ (ಸಿಎ) ಖಂಡದಡಿ ಪ್ರವರ್ಗೀಕರಿಸಲಾದ ನಿರ್ಣಾಯಕ ಹುದ್ದೆಗಳಿಗೆ ಮತ್ತು ಯಾವುದೇ ನಿರ್ಣಾಯಕ ಹುದ್ದೆಗಳು ಲಭ್ಯವಿಲ್ಲದಿದ್ದರೆ, ಸರ್ಕಾರವು ಅಧಿಸೂಚಿಸಬಹುದಾದ ಇತರ ಹುದ್ದೆಗಳಿಗೆ ವರ್ಗಾವಣೆಗೊಳ್ಳತಕ್ಕದ್ದು."

**4. ಪ್ರಕರಣ 5ರ ತಿದ್ದುಪಡಿ.-** ಮೂಲ ಅಧಿನಿಯಮದ, 5ನೇ ಪ್ರಕರಣದ, (iii)ನೇ ಖಂಡದ ಬದಲಿಗೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ :-

"(iii) ಈ ಪ್ರಕ್ರಿಯೆಯಡಿಯಲ್ಲಿನ ಎಲ್ಲಾ ವರ್ಗಾವಣೆಗಳು, 2ನೇ ಪ್ರಕರಣದ (ಸಿಎ) ಖಂಡದಡಿ ಪ್ರವರ್ಗೀಕರಿಸಲಾದ ನಿರ್ಣಾಯಕ ಹುದ್ದೆಗಳಿಗೆ ಮತ್ತು ಯಾವುದೇ ನಿರ್ಣಾಯಕ ಹುದ್ದೆಗಳು ಲಭ್ಯವಿಲ್ಲದಿದ್ದರೆ, ಸರ್ಕಾರವು ಅಧಿಸೂಚಿಸಬಹುದಾದ ಇತರ ಹುದ್ದೆಗಳಿಗೆ ವರ್ಗಾವಣೆಗೊಳ್ಳತಕ್ಕದ್ದು."

**5. ಪ್ರಕರಣ 6ರ ಪ್ರತಿಯೋಜನೆ.-** ಮೂಲ ಅಧಿನಿಯಮದ, 6ನೇ ಪ್ರಕರಣದ ಬದಲಿಗೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ :-

"**6. ಕೋರಿಕೆ ವರ್ಗಾವಣೆ.-** ಒಂದು ಶಾಲೆಯಲ್ಲಿ ಅಥವಾ ಪದವಿ-ಪೂರ್ವ ಕಾಲೇಜಿನಲ್ಲಿ ಕನಿಷ್ಠ ಸೇವಾವಧಿಯನ್ನು ಸಲ್ಲಿಸಿರುವ ಶಿಕ್ಷಕ ಅಥವಾ ಉಪನ್ಯಾಸಕನಿಗೆ, ವರ್ಗಾವಣೆಗಾಗಿ

ಲಭ್ಯವಿರುವ ನಿರ್ಣಾಯಕ ಹುದ್ದೆ ಮತ್ತು ನಿಯಮಿಸಬಹುದಾದಂಥ ಇತರ ಷರತ್ತುಗಳಿಗೆ ಒಳಪಟ್ಟು ವರ್ಗಾವಣೆಯನ್ನು ಕೋರಲು ಆಯ್ಕೆಯನ್ನು ನೀಡತಕ್ಕದ್ದು:

ಪರಂತು, ಕಲ್ಯಾಣ ಕರ್ನಾಟಕ ಪ್ರದೇಶದ ಯಾವುದೇ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುವ ಶಿಕ್ಷಕ ಅಥವಾ ಉಪನ್ಯಾಸಕರು, ಕಲ್ಯಾಣ ಕರ್ನಾಟಕ ಪ್ರದೇಶದ ಹೊರಗೆ, ವರ್ಗಾವಣೆ ಕೋರಿಕೆಗಾಗಿ ಇತರ ಎಲ್ಲಾ ಅರ್ಹತಾ ಷರತ್ತುಗಳ ಜೊತೆಗೆ, ಆ ಪ್ರದೇಶದಲ್ಲಿ ಕನಿಷ್ಠ ಹತ್ತು ವರ್ಷಗಳ ಸೇವೆಯನ್ನೂ ಸಹ ಪೂರ್ಣಗೊಳಿಸಿರತಕ್ಕದ್ದು."

**6. ಪ್ರಕರಣ 10ರ ತಿದ್ದುಪಡಿ.-** ಮೂಲ ಅಧಿನಿಯಮದ, 10ನೇ ಪ್ರಕರಣದಲ್ಲಿ,-

(i) ಉಪ-ಪ್ರಕರಣ (1)ರಲ್ಲಿ,-

(ಎ) ಖಂಡ (ii)ರ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ii-ಎ) ಗರ್ಭಿಣಿ ಶಿಕ್ಷಕಿ ಅಥವಾ ಐದು ವರ್ಷಗಳಿಗಿಂತ ಕಡಿಮೆಯಲ್ಲದ ವಯಸ್ಸಿನ ಮಗುವನ್ನು ಹೊಂದಿರುವ ಮಹಿಳಾ ಶಿಕ್ಷಕಿ:

ಪರಂತು ಸದರಿ ಉಪಬಂಧವು ಪ್ರಸೂತಿ ರಜೆಯಿಂದ ಹಿಂದಿರುಗಿದ ನಂತರ ಶಿಕ್ಷಕರು ಕರ್ತವ್ಯಕ್ಕೆ ಮರಳುವ ವರ್ಷದಲ್ಲಿ ಕೈಗೊಳ್ಳುವ ಶಿಕ್ಷಕರ ಸಾಮಾನ್ಯ ವರ್ಗಾವಣೆಗೆ ಮಾತ್ರ ಅನ್ವಯವಾಗತಕ್ಕದ್ದು."

(ಬಿ) ಖಂಡ (vii)ನ್ನು ಬಿಟ್ಟುಬಿಡತಕ್ಕದ್ದು.

(ii) ಉಪ-ಪ್ರಕರಣ (4)ರಲ್ಲಿನ "ಮತ್ತು (vii)ನೇ" ಎಂಬ ಪದ, ಆವರಣಗಳು ಮತ್ತು ಅಂಕಿಗಳನ್ನು ಬಿಟ್ಟುಬಿಡತಕ್ಕದ್ದು.

**7. ಅನುಸೂಚಿಯ ತಿದ್ದುಪಡಿ.-** ಮೂಲ ಅಧಿನಿಯಮದ, ಅನುಸೂಚಿ-Iರಲ್ಲಿನ, ಕ್ರಮಸಂಖ್ಯೆ-II ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

| | |
|---|---|
| III | ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (DIET)/ ಶಿಕ್ಷಕರ ತರಬೇತಿ ಸಂಸ್ಥೆಗಳು (TTI) / ಶಿಕ್ಷಕರ ಕಲಿಕಾ ಕಾಲೇಜುಗಳಲ್ಲಿನ (CTE) / ರಾಜ್ಯ, ವಿಭಾಗೀಯ ಮತ್ತು ಜಿಲ್ಲಾ ಮಟ್ಟದ ಆಡಳಿತ ಕಛೇರಿಗಳು ಎಂದರೆ, ಶಾಲಾ ಶಿಕ್ಷಣ ಆಯುಕ್ತರ ಕಛೇರಿ/ ಹೆಚ್ಚುವರಿ ಶಾಲಾ ಶಿಕ್ಷಣ ಆಯುಕ್ತರ ಕಛೇರಿ/ ಡಿಎಸ್‌ಇಆರ್‌ಟಿ/ ಕೆಎಸ್‌ಇಎಬಿ/ಎಸ್‌ಎಸ್‌ಕೆ/ಕೆಟಿಬಿಎಸ್/ಡಿಡಿಪಿಐ-ಗಳಲ್ಲಿನ ಬೋಧಕ ಹುದ್ದೆಗಳು |
| 1 | ಉಪನ್ಯಾಸಕ |
| 2 | ಉಪನ್ಯಾಸಕ (ಕರಕುಶಲ) |
| 3 | ಉಪನ್ಯಾಸಕ (ದೈಹಿಕ ಶಿಕ್ಷಣ) |
| 4 | ಕಿರಿಯ ಪ್ರೋಗ್ರಾಮ್ ಅಧಿಕಾರಿ (Junior Program Officer) |
| 5 | ಸಹಾಯಕ ನಿರ್ದೇಶಕ (ಬೋಧನೆ) |
| 6 | ಉಪನ್ಯಾಸಕ (ಕಾರ್ಯಾನುಭವ) |
| 7 | ವಿಶೇಷ ತನಿಖಾಧಿಕಾರಿ (ವೃತ್ತಿ ಶಿಕ್ಷಣ) |
| 8 | ಉಪನ್ಯಾಸಕ (ಚಿತ್ರಕಲೆ) |

"

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಈ ಮುಂದಿನವುಗಳಿಗಾಗಿ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2020 (2020ರ ಕರ್ನಾಟಕ ಅಧಿನಿಯಮ 04)ನ್ನು,-

(i) ನಿರ್ಣಾಯಕ ಹುದ್ದೆಗಳನ್ನು ಪರಿಭಾಷಿಸಲು;

(ii) ಅನುಸೂಚಿ-Iರ ಕ್ರಮ ಸಂಖ್ಯೆ IIIರಲ್ಲಿನ ಹುದ್ದೆಗಳಿಗೆ ಕೌನ್ಸಿಲಿಂಗ್ ಮೂಲಕ ವರ್ಗಾವಣೆಗಾಗಿ ಉಪಬಂಧವನ್ನು ಕಲ್ಪಿಸಲು;

(iii) ಸದರಿ ಹುದ್ದೆಗಳಿಗೆ ಗರಿಷ್ಠ ಸೇವಾವಧಿಯನ್ನು ನಿರ್ದಿಷ್ಟಪಡಿಸಲು;

(iv) ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯಲ್ಲಿನ ಬೋಧಕೇತರ ಹುದ್ದೆಗಳಿಗೆ ಮತ್ತು ರಾಜ್ಯ ಸಿವಿಲ್ ಸೇವೆಗಳು ಅಥವಾ ಮಂಡಳಿಗಳು ಅಥವಾ ನಿಗಮಗಳಲ್ಲಿನ ಯಾವುದೇ ಇತರ ಹುದ್ದೆಗಳಿಗೆ ಅನುಸೂಚಿ-Iರಲ್ಲಿ ಮತ್ತು 2ನೇ ಪ್ರಕರಣದ (ಎಚ್) ಖಂಡದಲ್ಲಿ ನಿರ್ದಿಷ್ಟಪಡಿಸಿದ ಬೋಧಕ ಹುದ್ದೆಗಳ ಸ್ಥಾನಿಕರ ವರ್ಗಾವಣೆಯನ್ನು ಪ್ರತಿಷೇಧಿಸುವ ಉಪಬಂಧವನ್ನು ಕಲ್ಪಿಸಲು,

(v) ಕೆಲವು ಇತರ ಆನುಷಂಗಿಕ ತಿದ್ದುಪಡಿಗಳನ್ನು ಮಾಡಲು,

- ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

## ಪ್ರತ್ಯಾಯೋಜಿತ ಶಾಸನ ರಚನಾಧಿಕಾರ ಕುರಿತು ಜ್ಞಾಪನ ಪತ್ರ

| | |
|---|---|
| **ಖಂಡ 4**: | 4ನೇ ಖಂಡವು, ಕೋರಿಕೆ ವರ್ಗಾವಣೆಗಾಗಿ ಷರತ್ತುಗಳನ್ನು ನಿರ್ದಿಷ್ಟಪಡಿಸುವುದಕ್ಕೆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

**ಎಸ್. ಮಧು ಬಂಗಾರಪ್ಪ**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

# ಅನುಬಂಧ

## ಕರ್ನಾಟಕ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ, 202ರ (2020ರ ಕರ್ನಾಟಕ ಅಧಿನಿಯಮ ಸಂಖ್ಯೆ 4) ಉದ್ಧೃತ ಭಾಗ

**XXX XXX XXX**

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು.-

(ಎ) **"ನೇಮಕಾತಿ"** ಎಂದರೆ, ನೇರ ನೇಮಕಾತಿ, ವಿಲೀನಗೊಳಿಸುವಿಕೆ ಅಥವಾ ಮುಂಬಡ್ತಿಯ ಮೂಲಕ ನೇಮಕಾತಿ;

(ಬಿ) **"ನೇಮಕಾತಿ ಪ್ರಾಧಿಕಾರ"** ಎಂದರೆ, ಶಿಕ್ಷಕನ ಹುದ್ದೆಗೆ ನೇಮಕ ಮಾಡಲು ಸಕ್ಷಮವಾದ ಪ್ರಾಧಿಕಾರ;

(ಸಿ) **"ಸಕ್ಷಮ ಪ್ರಾಧಿಕಾರ"** ಎಂದರೆ, ನಿಯಮಿಸಬಹುದಾದಂತೆ ಶಿಕ್ಷಕರ ವರ್ಗಾವಣೆ ಆದೇಶವನ್ನು ಮಾಡಲು ಸಕ್ಷಮವಾದ ಪ್ರಾಧಿಕಾರ;

(ಸಿ-ಎ) **"ಉಪನ್ಯಾಸಕ" ಕನಿಷ್ಠ ಸೇವಾ ಅವಧಿ** ಎಂದರೆ ಅನುಸೂಚಿ-IIರಲ್ಲಿ ನಿರ್ದಿಷ್ಟಪಡಿಸಿದಂತೆ ಸಂಯುಕ್ತ ಜೂನಿಯರ್ ಕಾಲೇಜಿನಲ್ಲಿ ಅಥವಾ ಪದವಿ-ಪೂರ್ವ ಕಾಲೇಜಿನಲ್ಲಿ ಪ್ರಾಂಶುಪಾಲ ಅಥವಾ ಉಪನ್ಯಾಸಕ ಹುದ್ದೆಗಳ ಪ್ರವರ್ಗಕ್ಕೆ ನೇಮಿಸಲಾದ ವ್ಯಕ್ತಿ;

(ಡಿ) **"ಕನಿಷ್ಠ ಸೇವಾ ಅವಧಿ"** ಎಂದರೆ ಪ್ರಕರಣ 2ರ (ಎಫ್) ಖಂಡದ ಹಾಗೂ ಪ್ರಕರಣ 4ರ ಉಪಬಂಧಗಳಿಗನುಸಾರವಾಗಿ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಶಿಕ್ಷಕರನ್ನು ಅಥವಾ ಉಪನ್ಯಾಸಕರನ್ನು ಮರುನಿಯೋಜನೆ ಮಾಡಲಾಗಿದ್ದಲ್ಲಿ ಅಲ್ಲಿಂದ ಶಾಲೆಯ ಅಥವಾ ಪದವಿಪೂರ್ವ ಕಾಲೇಜಿನಲ್ಲಿ ಸಲ್ಲಿಸಿದ ಸೇವೆಯನ್ನು ಒಳಗೊಂಡಂತೆ ಶಾಲೆ ಅಥವಾ ಪದವಿ ಪೂರ್ವ ಕಾಲೇಜುಗಳಲ್ಲಿ ಸಲ್ಲಿಸಿದ ನಿರಂತರ ಮೂರು ವರ್ಷಗಳ ಸೇವೆ.

**XXX XXX XXX**

**4. ಶಿಕ್ಷಕರ ಸಮರ್ಪಕ ಮರುಹಂಚಿಕೆ (rationalisation).-** (1) ಪ್ರತಿ ಪರ್ಯಾಯ (alternate) ವರ್ಷವೂ ಮಂಜೂರಾದ ಹುದ್ದೆಗಳು ಮತ್ತು ಅದರಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರನ್ನುಅಥವಾ ಉಪನ್ಯಾಸಕರನ್ನು, ರಾಜ್ಯ ಸರ್ಕಾರವು ಕಾಲ-ಕಾಲಕ್ಕೆ ನಿಗದಿಪಡಿಸಿದ ಶಿಷ್ಯ-ಶಿಕ್ಷಕ ಅನುಪಾತದ ಅಥವಾ ವಿದ್ಯಾರ್ಥಿ-ಉಪನ್ಯಾಸಕ ಅನುಪಾತದ ಆಧಾರದ ಮೇಲೆ ಸಮರ್ಪಕವಾಗಿ ಮರುಹಂಚಿಕೆ ಮಾಡತಕ್ಕದ್ದು.

(2) ಸಮರ್ಪಕ ಮರುಹಂಚಿಕೆ ಮಾಡಿದ ತರುವಾಯ ಯಾವುದೇ ಶಾಲೆ ಅಥವಾ ಪದವಿ-ಪೂರ್ವ ಕಾಲೇಜಿನಲ್ಲಿ ಶಿಕ್ಷಕನ ಅಥವಾ ಉಪನ್ಯಾಸಕರ ಹೆಚ್ಚುವರಿ ಹುದ್ದೆಗಳನ್ನು ಅದು ಕೊರತೆ ಇರುವ ಯಾವುದೇ ಶಾಲೆ ಅಥವಾ ಪದವಿ- ಪೂರ್ವ ಕಾಲೇಜಿಗೆ ಮರು ನಿಯೋಜನೆಮಾಡತಕ್ಕದ್ದು. ಹಾಗೆ ನಿರ್ಧರಿಸಲಾದ ಹೆಚ್ಚುವರಿ ಶಿಕ್ಷಕರನ್ನು, ನಿಯಮಿಸಬಹುದಾದ ಅಂಥ ಇತರ ಷರತ್ತುಗಳಿಗೆ ಒಳಪಟ್ಟು, ಆದ್ಯತೆಯ ಕ್ರಮದ ಆಧಾರದ ಮೇಲೆಗೆ ಕೌನ್ಸಿಲಿಂಗ್ ಮೂಲಕ ವರ್ಗಾವಣೆ ಮಾಡತಕ್ಕದ್ದು.

**XXX XXX XXX**

**5. ವಲಯವಾರು ವರ್ಗಾವಣೆಗಳು.-** ಪ್ರತಿ ಪರ್ಯಾಯ ವರ್ಷದಲ್ಲಿ,-

(i) ವಲಯ-ಸಿ ನಲ್ಲಿ ಕನಿಷ್ಠ ಹತ್ತು ವರ್ಷಗಳ ಸೇವೆಯನ್ನು ಸಲ್ಲಿಸಿಲ್ಲದ ಮತ್ತು ವಲಯ-ಎ ನಲ್ಲಿ ನಿರಂತರವಾಗಿ ಹತ್ತು ವರ್ಷಗಳಿಗೂ ಹೆಚ್ಚಿನ ಸೇವೆಯನ್ನು ಸಲ್ಲಿಸಿರುವ ಪ್ರತಿಯೊಬ್ಬ ಶಿಕ್ಷಕನನ್ನು, ರಾಜ್ಯ ಸರ್ಕಾರವು ನಿಯಮಿಸಬಹುದಾದ ಅಂಥ ಷರತ್ತುಗಳಿಗೆ ಒಳಪಟ್ಟು ವಲಯ-ಸಿ ಅಥವಾ ವಲಯ-ಬಿ ಗೆ ವರ್ಗಾವಣೆ ಮಾಡತಕ್ಕದ್ದು.

(ii) (i)ನೇ ಉಪಖಂಡದ ಅಡಿಯಲ್ಲಿ ವಲಯ-ಸಿಗೆ ವರ್ಗಾವಣೆಗೊಂಡ ಶಿಕ್ಷಕನ ಸ್ಥಳ ನಿಯುಕ್ತಿಗಾಗಿ ಯಾವುದೇ ಖಾಲಿ ಹುದ್ದೆಯು ಲಭ್ಯವಿಲ್ಲದಿದ್ದಲ್ಲಿ, ವಲಯ-ಸಿ ಅಥವಾ ವಲಯ-ಬಿ

ನಲ್ಲಿ ಕನಿಷ್ಠ ಸೇವಾವಧಿಯನ್ನು ಪೂರೈಸಿರುವ ಸಮ್ಮತಿಸಿರುವ ಶಿಕ್ಷಕರನ್ನು ಆದ್ಯತೆಯ ಕ್ರಮದಲ್ಲಿ ವಲಯ-ಎ ಗೆ ವರ್ಗಾವಣೆ ಮಾಡುವುದರ ಮೂಲಕ ಖಾಲಿ ಹುದ್ದೆಯನ್ನು ಸೃಜನೆ ಮಾಡಬಹುದು.

(iii) ಪದವಿ-ಪೂರ್ವ ಶಿಕ್ಷಣ ಇಲಾಖೆಗೆ ರಾಜ್ಯವು ಏಕ ಘಟಕವಾಗಿರುವುದರಿಂದ, ಸರ್ಕಾರಿ ಪದವಿ-ಪೂರ್ವ ಕಾಲೇಜು ಅಥವಾ ಸಂಯುಕ್ತ ಜೂನಿಯರ್ ಕಾಲೇಜಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರಿಗೆ ವಲಯ ವರ್ಗಾವಣೆಯು ಅನ್ವಯಿಸುವುದಿಲ್ಲ.

**XXX XXX XXX**

**6. ಕೋರಿಕೆಯ ವರ್ಗಾವಣೆ.-** ಒಂದು ಶಾಲೆ ಅಥವಾ ಪದವಿ-ಪೂರ್ವ ಕಾಲೇಜಿನಲ್ಲಿ ಕನಿಷ್ಠ ಸೇವಾ ಅವಧಿಯನ್ನು ಸಲ್ಲಿಸಿರುವ ಶಿಕ್ಷಕನಿಗೆ, ಖಾಲಿ ಹುದ್ದೆಗಳ ಲಭ್ಯತೆಗೆ ಮತ್ತು ನಿಯಮಿಸ ಬಹುದಾದ ಅಂಥ ಇತರ ಷರತ್ತುಗಳಿಗೆ ಒಳಪಟ್ಟು ವರ್ಗಾವಣೆಯನ್ನು ಕೋರುವ ಆಯ್ಕೆಯನ್ನು ನೀಡತಕ್ಕದ್ದು:

ಪರಂತು, ಸಮರ್ಪಕ ಮರುಹಂಚಿಕೆ ಅಥವಾ ವಲಯವಾರು ವರ್ಗಾವಣೆಯ ಪರಿಣಾಮವಾಗಿ ಒಂದು ಶಾಲೆ ಅಥವಾ ಪದವಿ- ಪೂರ್ವ ಕಾಲೇಜಿನಿಂದ ಮತ್ತೊಂದಕ್ಕೆ ಶಿಕ್ಷಕನ ವರ್ಗಾವಣೆಯಾದ ಪ್ರಕರಣದಲ್ಲಿ, ಒಂದು ಶಾಲೆ ಅಥವಾ ಪದವಿ- ಪೂರ್ವ ಕಾಲೇಜಿನಲ್ಲಿ ಕನಿಷ್ಠ ಸೇವೆಯನ್ನು ಲೆಕ್ಕಹಾಕುವ ಉದ್ದೇಶಕ್ಕಾಗಿ ಹಿಂದಿನ ಶಾಲೆ ಅಥವಾ ಪದವಿ- ಪೂರ್ವ ಕಾಲೇಜಿನಲ್ಲಿ ಸಲ್ಲಿಸಿದ ಸೇವೆಯನ್ನು ಪರಿಗಣಿಸತಕ್ಕದ್ದು:

ಮತ್ತು ಪರಂತು, ಕಲ್ಯಾಣ ಕರ್ನಾಟಕ ಪ್ರದೇಶದ ಯಾವುದೇ ಆರು ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕನು, ಕಲ್ಯಾಣ ಕರ್ನಾಟಕ ಪ್ರದೇಶದ ಹೊರಗೆ ವರ್ಗಾವಣೆಯನ್ನು ಕೋರುವುದಕ್ಕಾಗಿ, ಎಲ್ಲಾ ಇತರ ಅರ್ಹತಾ ಷರತ್ತುಗಳ ಜೊತೆಗೆ ಆ ಪ್ರದೇಶದಲ್ಲಿ ಕನಿಷ್ಠ ಹತ್ತು ವರ್ಷಗಳ ಸೇವೆಯನ್ನೂ ಕೂಡ ಪೂರೈಸಿರತಕ್ಕದ್ದು.

**XXX XXX XXX**

**10. ಸಮರ್ಪಕ ಮರುಹಂಚಿಕೆ; ವಲಯವಾರು ವರ್ಗಾವಣೆಗಳಿಂದ ವಿನಾಯಿತಿಗಳು ಮತ್ತು ಕೋರಿಕೆ ವರ್ಗಾವಣೆಗಳಿಗೆ ಆದ್ಯತೆ.-** (1) ಸಮರ್ಪಕ ಮರುಹಂಚಿಕೆ; ವಲಯವಾರು ವರ್ಗಾವಣೆಗಳಿಂದ ವಿನಾಯಿತಿಗಳು ಮತ್ತು ಕೋರಿಕೆ ವರ್ಗಾವಣೆಗಳಿಗೆ ಆದ್ಯತೆಯು (2) ರಿಂದ (5)ನೇ ಉಪಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳಿಗೆ ಒಳಪಟ್ಟು ಈ ಮುಂದಿನಂತಿದೆ,-

(i) ಶಿಕ್ಷಕ ಅಥವಾ ಆತನ ಪತ್ನಿ ಅಥವಾ ಆಕೆಯ ಪತಿ (spouse) ಅಥವಾ ಮಕ್ಕಳು, ಶಿಕ್ಷಕನು ಕಾರ್ಯನಿರ್ವಹಿಸುತ್ತಿರುವ ತಾಲ್ಲೂಕಿನೊಳಗೆ ಚಿಕಿತ್ಸೆಯು ಲಭ್ಯವಿಲ್ಲದ ಕೊನೆಯ ಹಂತದ (terminal) ಖಾಯಿಲೆ ಅಥವಾ ತೀವ್ರ ಅನಾರೋಗ್ಯದಿಂದ ಬಳಲುತ್ತಿದ್ದಲ್ಲಿ;

(ii) ಅಂಗ ವೈಕಲ್ಯಗಳುಳ್ಳ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ, 2016ರ (2016ರ ಕೇಂದ್ರ ಅಧಿನಿಯಮ 49) 2ನೇ ಪ್ರಕರಣದ (ಆರ್) ಖಂಡದಲ್ಲಿ ಪರಿಭಾಷಿಸಿದಂತೆ ಗುರುತಿಸಿದ ಮಟ್ಟದ ಅಂಗವೈಕಲ್ಯದ (Bench mark disability) ಶಿಕ್ಷಕ ಅಥವಾ ಆತನ ಪತ್ನಿ ಅಥವಾ ಆಕೆಯ ಪತಿ (Spouse) ಅಥವಾ ಮಕ್ಕಳು;

(iii) 12 ವರ್ಷಗಳ ಒಳಗಿನ ಅವಲಂಬಿತ ಮಕ್ಕಳನ್ನು ಹೊಂದಿರುವ ವಿಧವೆ ಅಥವಾ ವಿಧುರ ಅಥವಾ ವಿಚ್ಛೇದಿತ ಶಿಕ್ಷಕ;

(iv) ಭಾರತೀಯ ರಕ್ಷಣಾ ದಳಗಳು ಅಥವಾ ಅರೆ ಮಿಲಿಟರಿ ದಳಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸೈನಿಕ ಅಥವಾ ನಿವೃತ್ತಿ ಹೊಂದಿದ ಅಥವಾ ಶಾಶ್ವತವಾಗಿ ಅಂಗವಿಕಲರಾದ ಅಥವಾ ಮೃತ ಸೈನಿಕರ ಪತಿ ಅಥವಾ ಪತ್ನಿಯಾಗಿರುವ (Spouse) ಶಿಕ್ಷಕ;

(v) ರಾಜ್ಯ ಅಥವಾ ಕೇಂದ್ರ ಸರ್ಕಾರ ಅಥವಾ ಅನುದಾನಿತ ಶೈಕ್ಷಣಿಕ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವವರ ಪತಿ ಅಥವಾ ಪತ್ನಿಯಾಗಿರುವ (Spouse) ಶಿಕ್ಷಕ;

(vi) ಮಹಿಳಾ ಶಿಕ್ಷಕರ ಸಂದರ್ಭದಲ್ಲಿ ಐವತ್ತು ವರ್ಷಗಳು ಮತ್ತು ಪುರುಷ ಶಿಕ್ಷಕರ ಸಂದರ್ಭದಲ್ಲಿ ಐವತ್ತೈದು ವರ್ಷಗಳನ್ನು ಮೀರಿದ ಶಿಕ್ಷಕರು;

(vii) ಗರ್ಭಿಣಿ ಶಿಕ್ಷಕಿ ಅಥವಾ ಒಂದು ವರ್ಷದ ಒಳಗಿನ ಮಗುವನ್ನು ಹೊಂದಿರುವ ಮಹಿಳಾ ಶಿಕ್ಷಕಿ.

(2) ಉಪಪ್ರಕರಣ (1)ರ ಖಂಡ (i)ಯಿಂದ (iv)ವರೆಗಿನ ಖಂಡಗಳ ಅಡಿಯಲ್ಲಿ ಬರುವ ಪ್ರವರ್ಗಗಳು,-

(ಎ) ಸಮರ್ಪಕ ಮರುಹಂಚಿಕೆ ಅಡಿಯಲ್ಲಿ ವಿನಾಯಿತಿ.
(ಬಿ) ವಲಯ ವರ್ಗಾವಣೆ ಅಡಿಯಲ್ಲಿ ವಿನಾಯಿತಿ.
(ಸಿ) ಕೋರಿಕೆ ವರ್ಗಾವಣೆಗಳ ಅಡಿಯಲ್ಲಿ ಆದ್ಯತೆ.
(ಶಿಕ್ಷಕನು ಸೇವಾ ಅವಧಿಯಲ್ಲಿ ಒಂದು ಬಾರಿ ಮಾತ್ರ ಆದ್ಯತೆಯನ್ನು ಕ್ಲೇಮು ಮಾಡತಕ್ಕದ್ದು).
(ಡಿ) ನಿರ್ದಿಷ್ಟ ಹುದ್ದೆಗಳಿಗಾಗಿ ನಿರ್ದಿಷ್ಟಪಡಿಸಲಾದ ಲಿಖಿತ ಪರೀಕ್ಷೆಯನ್ನು ಯಶಸ್ವಿಯಾಗಿ ಉತ್ತೀರ್ಣರಾಗುವ ಮೂಲಕ ವರ್ಗಾವಣೆ ಪಡೆದ ಅಂತಹ ನಿರ್ದಿಷ್ಟ ಹುದ್ದೆಯಿಂದ ಅವರು ಹಿಮ್ಮುಖ ವರ್ಗಾವಣೆಯನ್ನು (transferred back) ಪಡೆಯುವಾಗ ಆದ್ಯತೆ

-ಇವುಗಳಿಗಾಗಿ ಅರ್ಹವಾಗಿರುತ್ತವೆ.

(3) (i) ರಿಂದ (iv)ನೇ ಖಂಡಗಳ ಅಡಿಯಲ್ಲಿ ಬರುವ ಪ್ರವರ್ಗಗಳನ್ನು ವಿಶೇಷ ಪ್ರವರ್ಗಗಳೆಂದು ವರ್ಗೀಕರಿಸಲಾಗಿದೆ. ಈ ಪ್ರವರ್ಗಗಳ ಅಡಿಯಲ್ಲಿ ಮಾಡಲಾದ ವರ್ಗಾವಣೆಗಳನ್ನು 7ನೇ ಪ್ರಕರಣದ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಶೇಕಡಾ ಹದಿನೈದರ ಮತ್ತು ಪದವಿ-ಪೂರ್ವ ಕಾಲೇಜಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರ ಸಂದರ್ಭದಲ್ಲಿ (ಸಂಬಂಧಿತ ವಿಷಯದಲ್ಲಿ ಸಂಬಂಧಪಟ್ಟ ಉಪನ್ಯಾಸಕರ ವರ್ಗದ ಕಾರ್ಯಬಲದ) ಶೇಕಡ ಹತ್ತರಷ್ಟಂತೆ ವರ್ಗಾವಣೆ ಮಿತಿಗಳ ಅಡಿಯಲ್ಲಿ ಲೆಕ್ಕ ಹಾಕತಕ್ಕದ್ದಲ್ಲ.

(4) (vi) ಮತ್ತು (vii)ನೇ ಖಂಡಗಳ ಅಡಿಯಲ್ಲಿ ಬರುವ ಪ್ರವರ್ಗಗಳು ಸಮರ್ಪಕ ಮರುಹಂಚಿಕೆ ಮತ್ತು ವಲಯವಾರು ವರ್ಗಾವಣೆಗಳ ಅಡಿಯಲ್ಲಿನ ವಿನಾಯತಿಗಳಿಗೆ ಮಾತ್ರವೇ ಅರ್ಹರಾಗತಕ್ಕದ್ದು.

(5) ಉಪಪ್ರಕರಣ (1)ರ ಖಂಡ (v)ರಡಿಯಲ್ಲಿ ಬರುವ ಶಿಕ್ಷಕರನ್ನು ಕೋರಿಕೆ ವರ್ಗಾವಣೆ ಅವಧಿಯಲ್ಲಿ ಆದ್ಯತೆ ನೀಡತಕ್ಕದ್ದು. ಶಿಕ್ಷಕನು ಆತನ ಪತ್ನಿ ಅಥವಾ ಆಕೆಯ ಪತಿಯು ಬೇರೆಬೇರೆ ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿದ್ದರೆ, ಆ ಜಿಲ್ಲೆಯ ಯಾವುದೇ ತಾಲ್ಲೂಕಿನಲ್ಲಿ ಲಭ್ಯವಿರುವ ಖಾಲಿ ಸ್ಥಾನಕ್ಕೆ ವರ್ಗಾವಣೆ ಕೋರಲು ಅನುಮತಿಸತಕ್ಕದ್ದು. ಇಬ್ಬರೂ ಅದೇ ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿದ್ದರೆ, ಆಗ ಆದ್ಯತೆಯ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಲು ಅವರು ಅರ್ಹರಾಗತಕ್ಕದ್ದಲ್ಲ.

(6) ಉಪಪ್ರಕರಣ (1)ರ ಖಂಡ (v)ರ ಅಡಿಯಲ್ಲಿ ಅರ್ಹ ಶಿಕ್ಷಕರು ಕೋರಿಕೆ ವರ್ಗಾವಣೆಗಾಗಿ ಅಥವಾ ನಿರ್ದಿಷ್ಟ ಹುದ್ದೆಗಳಿಗಾಗಿ ನಿರ್ದಿಷ್ಟಪಡಿಸಲಾದ ಲಿಖಿತ ಪರೀಕ್ಷೆಯನ್ನು ಯಶಸ್ವಿಯಾಗಿ ಉತ್ತೀರ್ಣರಾಗುವ ಮೂಲಕ ವರ್ಗಾವಣೆ ಪಡೆದ ಅಂತಹ ನಿರ್ದಿಷ್ಟ ಹುದ್ದೆಯಿಂದ ಹಿಮ್ಮುಖ ವರ್ಗಾವಣೆಯನ್ನು ಪಡೆಯುವಾಗ ಆದ್ಯತಾ ಕ್ರಮಕ್ಕನುಸಾರವಾಗಿ ಆದ್ಯತೆಯನ್ನು ನೀಡಲಾಗುವುದು.

(7) ಕಡ್ಡಾಯ ವರ್ಗಾವಣೆಯ ಮೇಲೆ 2018-19ನೇ ವರ್ಷದಲ್ಲಿ ವರ್ಗಾವಣೆಗೊಂಡ ಪದವಿ-ಪೂರ್ವ ಕಾಲೇಜಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರ ಸಂದರ್ಭದಲ್ಲಿ, ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ಎರಡನೇ ತಿದ್ದುಪಡಿ) ಅಧಿನಿಯಮ, 2021ರ ಪ್ರಾರಂಭದ ದಿನಾಂಕದ ನಿಕಟ ತರುವಾಯ ಮಾಡಿದ ವರ್ಗಾವಣೆಯಲ್ಲಿ, ಜ್ಯೇಷ್ಠತಾ ಘಟಕದೊಳಗೆ ಸ್ಥಳನಿಯುಕ್ತಿಯ ಪ್ರಯೋಜನವನ್ನು ನೀಡುವುದಕ್ಕಾಗಿ, ಮುಂಬರುವ ಇತರ ರೀತಿಯ ವರ್ಗಾವಣೆಗಳಿಗೆ ಖಾಲಿ ಹುದ್ದೆಗಳ ಲಭ್ಯತೆಗೆ ಒಳಪಟ್ಟು ಅವರು ಕಾರ್ಯನಿರ್ವಹಿಸುತ್ತಿರುವ ಜ್ಯೇಷ್ಠತಾ ಘಟಕದೊಳಗೆ ಒಂದು ಸಲದ ಕ್ರಮವಾಗಿ (one time measure) ನಿಯಮಿಸಬಹುದಾದಂತಹ ರೀತಿಯಲ್ಲಿ ವರ್ಗಾವಣೆಯ ಸ್ಥಳವನ್ನು ಆಯ್ಕೆಮಾಡಲು ಅವಕಾಶವನ್ನು ಸಹ ಒದಗಿಸತಕ್ಕದ್ದು.

**XXX XXX XXX**

**KARNATAKA LEGISLATIVE ASSEMBLY**

**SIXTEENTH LEGISLATIVE ASSEMBLY**

**NINTH SESSION**

**(Adjourned Meetings)**

# THE KARNATAKA STATE CIVIL SERVICES (REGULATION OF TRANSFER OF TEACHERS) (AMENDMENT) BILL, 2026

## (LA Bill No. 10 of 2026)

A Bill further to amend the Karnataka State Civil Services (Regulation of Transfer of Teachers) Act, 2020.

Whereas it is expedient further to amend the Karnataka State Civil Services (Regulation of Transfer of Teachers) Act, 2020 (Karnataka Act 04 of 2020) for the purposes hereinafter appearing;

Be it enacted by the Karnataka State Legislature in the Seventy seventh year of the Republic of India, as follows:-

**1. Short title and commencement.-** (1) This Act may be called the Karnataka State Civil Services (Regulation of Transfer of Teachers) (Amendment) Act, 2026.

(2) It shall come into force at once.

**2. Amendment of section 2.-** In the Karnataka State Civil Services (Regulation of Transfer of Teachers) Act, 2020 (Karnataka Act 04 of 2020) (hereinafter referred to as the Principal Act) , in section 2 ,-

(i) clause (ca), shall be renumbered as (cb);

(ii) before clause (cb), as so renumbered the following shall be inserted, namely:-

"(ca) **"Critical Posts"** means and include all the teaching posts including Lecturers in Government Pre-University Colleges, in the following categories, namely:-

(i) **Category 1:** Karnataka Public Schools, Adarsha Vidyalaya, PM SHRI schools other than Head Master or Vice Principal;

(ii) **Category 2:** All other schools and Government Pre-University Colleges having an enrolment exceeding 250 students or as per enrolment threshold notified by the Government from time to time other than Head Master or Vice Principal; and

(iii) **Category 3:** Head Master or Vice Principal of High School or Principal in Government Pre-University Colleges under Category 1 and 2."

(iii) in clause (d), the following shall be inserted at the end, namely:-

"Provided that in case of transfers to the posts specified in serial number III of Schedule-I shall only be by counselling for which the minimum period of service rendered in the incumbent's present cadre in schools / colleges shall be twelve continuous years.

Provided further that the maximum period of service in the posts specified in serial number III of Schedule-I shall only be three years.

Provided also that the incumbents of teaching posts specified in Schedule-I and clause (h) of section 2, shall not be transferred to the non-teaching posts in the School Education and Literacy Department and in any other posts in the State Civil Services or Boards or Corporations."

**3. Amendment of section 4.-** In the Principal Act, in section 4, after sub-section (2), the following shall be inserted, namely:-

"(3) All transfers under this process shall be to the Critical posts categorised under clause (ca) of section 2 and if no critical posts available then to other posts which may be notified by the Government."

**4. Amendment of section 5.-** In the Principal Act, in section 5, for clause (iii), the following shall be substituted, namely:-

"(iii) All transfers under this process shall be to the Critical posts categorised under clause (ca) of section 2 and if no critical posts available then to other posts which may be notified by the Government."

**5. Substitution of section 6.-** In the Principal Act, for section 6 of the following shall be substituted, namely:-

"**6. Request transfer.-** A teacher or Lecturer who has served minimum period of service in a school or Pre-University College shall be offered an option to seek transfer subject to availability of critical post for transfer and such other conditions as may be prescribed:

Provided further that, a teacher or Lecturer working in any of the districts of Kalyana Karnataka region, in addition to all other eligibility conditions shall also have completed a minimum of ten years of service in the region, for seeking transfer outside of Kalyana Karnataka region."

**6. Amendment of section 10.-** In the Principal Act, in section 10,-

(i) in sub-section (1),-

(a) after clause (ii), the following shall be inserted, namely:-

" (ii-a) pregnant teacher or a female teacher with a child of less than five years:

Provided that the said provision shall apply only to the general transfer of teachers undertaken in the year in which the teacher resumes to duty upon return from maternity leave."

(b) clause (vii) shall be omitted.

(ii) in sub-section (4), the word, brackets and figures "and (vii)" shall be omitted.

**7. Amendment of Schedule.-** In the Principal Act, in Schedule-I after serial number II and the entries relating thereto, the following shall be inserted, namely:-

"

| | |
|---|---|
| III | The Teaching posts in District Institute of Education and Training (DIET) / Teacher Training Institutes (TTI) / College of Teacher Education (CTE) / State, Division and District level Administrative Offices viz., Office of the Commissioner of School Education/ Additional Commissioner of School Education / DSERT / KSEAB / SSK / KTBS / DDPI |
| 1 | Lecturer |
| 2 | Lecturer (Craft) |
| 3 | Lecturer (Physical Education) |
| 4 | Junior Program Officer |
| 5 | Assistant Director (Teaching) |
| 6 | Lecturer (Work Experience) |
| 7 | Special Inspector (Vocational Education) |
| 8 | Lecturer (Drawing) |

"

## STATEMENT OF OBJECTS AND REASONS

It is considered necessary further to amend the Karnataka State Civil Services (Regulation of Transfer of Teachers) Act, 2020 (Karnataka Act 04 of 2020) to,-

(i) define the critical post;

(ii) make provision for transfer by counselling to the post specified at serial number III of Schedule-I;

(iii) specify the maximum period of service to the said posts;

(iv) make provision to bar transfer of the incumbents of teaching posts specified in Schedule-I and clause (h) of section 2 to the non-teaching posts in the School Education and Literacy Department and in any other posts in the State Civil Services or Boards or Corporations; and

(v) make certain other consequential amendments.

Hence, the Bill.

## FINANCIAL MEMORANDUM

There is no extra expenditure involved in the proposed legislative measure.

## MEMORANDUM REGARDING DELEGATED LEGISLATION

| | |
|---|---|
| Clause-4 | Clause 4 empowers the State Government to make rules to specify the conditions to seek request transfer. |

The proposed delegation of legislative power is normal in character.

**S. MADHU BANGARAPPA**
Minister for School Education
and Literacy

**M.K. VISHALAKSHI**
Secretary
Karnataka Legislative Assembly

**ANNEXURE**

**EXTRACT FROM THE KARNATAKA STATE CIVIL SERVICES (REGULATION OF TRANSFER OF TEACHERS) ACT, 2020**

**(KARNATAKA AC 04 OF 2020)**

**XXX XXX XXX**

**2. Definitions.-**In this Act, unless the context otherwise requires,-

(a) "Appointment" means appointment by direct recruitment, by absorption or by promotion;

(b) "Appointing authority" means the authority competent to make appointment to the post of a teacher;

(c) "Competent authority" means the authority competent to make orders of transfer of teachers as may be prescribed;

(ca) “Lecturer” means a person appointed to a category of posts of Principal or lecturer in composite junior college or pre-university college as specified in Schedule-II.

(d) “Minimum period of service” means a continuous service of three years in a school or pre-university college including service rendered in a school or pre-university college from where the teacher or Lecturer has been re-deputed in the current academic year as per the provisions of clause (f) of section 2 and section 4.

**XXX XXX XXX**

**4. Rationalisation of teachers**.-(1) Every alternate year the sanctioned posts and the teachers or lecturers working thereof in aSchool or Pre-university College]1 shall be rationalized based on the Pupil-Teacher ratio or student-lecturer ratio fixed by the State Government from time to time.

(2) After rationalisation the excess posts of a teacher or lecturers in any School or Pre-university College shall be redeployed to any School or Pre-university College where it is deficit. The excess teachers or lecturers so determined shall be transferred through counselling based on the order of priority, subject to such other conditions as may be prescribed.

**XXX XXX XXX**

**5. Zonal transfers.-**Every alternate year,-

(i) every teacher who has not served minimum ten years in Zone-C and has served more than ten years continuously in Zone-A shall be transferred to Zone-C or Zone-B subject to such conditions as may be prescribed by the State Government.

(ii) if no vacancy is available for posting of a teacher transferred under sub-clause (i) to Zone-C, vacancy may be created by transfer of willing

teachers working in Zone-C or Zone-B who have completed minimum period of service to Zone-A in the order of priority.

(iii) Since the State is the single unit for Department of Pre-University Education, the zonal transfer is not applicable for Lecturer working in the Government Pre-University College or Composite Junior College.

**XXX** **XXX** **XXX**

**6. Request transfer.-** A teacher who has served minimum period of service in a School or Pre-university College shall be offered an option to seek transfer subject to availability of vacancies and such other conditions as may be prescribed:

Provided that, in case of transfer of teacher from one School or Pre-university College to another consequent upon rationalisation or zonal transfer the service rendered in previous School or Pre-university College shall be reckoned for the purpose of calculation of minimum service in a School or Pre-university College.

Provided further that, a teacher working in any of the six districts of Kalyana Karnataka region, in addition to all other eligibility conditions shall also have completed a minimum of ten years of service in the region, for seeking transfer outside of Kalyana Karnataka region.

**XXX** **XXX** **XXX**

**10. Exemptions from rationalization, zonal transfers and priority for request transfers.-**(1)The exemptions from rationalization, zonal transfers and priority for request transfers are as follows, subject to conditions specified in sub-sections (2) to (5),-

(i) teacher or spouse or children suffering from terminal illness or serious ailments for which treatment is not available within the taluk in which teacher is working;

(ii) teacher or spouse or children with bench mark disability as defined in clause (r) of section 2 of the Rights of persons with disabilities Act, 2016 (Central Act 49 of 2016);

(iii) widow or widower or a divorcee teacher with dependent children; below the age of 12 years;

(iv) teacher with spouse being a working soldier or retired or permanently disabled or deceased soldier of Indian Defence Forces or Para-Military Forces;

(v) teacher with spouse working with the State or Central Government or aided educational institution;

(vi) teachers above the age of fifty years in case of female teachers and fifty five years in case of male teachers; and

(vii) pregnant teacher or a female teacher with a child of less than one year.

(2) The categories falling under clauses (i) to (iv) of sub-section (1) are eligible for:

(a) Exemption under rationalization.
(b) Exemption under zonal transfer.
(c) Priority under request transfers.(Priority shall be claimed only once during the service of a teacher.)
(d) Priority while getting transferred back from specified post, to which specified post they had been transferred by successfully clearing the written examination as specified for such posts.

(3) The categories falling under clauses (i) to (iv) are classified as special categories. The transfers made under these categories shall not be counted under fifteen percent transfer limits and ten percent in case of Lecturers working in Pre-University College (working strength of concerned category of Lecturers in the relevant subject) as specified under section 7.

(4) The categories falling under clause (vi) and (vii) are eligible only for exemptions under rationalization and zonal transfers.

(5) The teachers falling under clause (v), of sub-section (1) shall be given priority during request transfer. If the teacher is working in a different taluk from that of the spouse he is allowed to seek transfer to the vacancy available in any of the taluk of that district. If both are working in the same taluk then they are not eligible to make application under priority.

(6) The teachers eligible under clause (v), of sub-section (1) for request transfer or while getting transferred back from specified post to which they had been transferred by successfully clearing the written examination as specified for such posts, will be given priority as per the order of priority.

(7) In case of a lecturer working in Pre-University College who was transferred on compulsory transfer during the year 2018-19 shall also be provided an opportunity to opt a place of transfer within the unit of seniority as a one time measure ahead of other types of transfers subject to the availability of vacancies so as to give the benefit of posting within the unit of seniority in the transfer done immediately after the date of commencement of the Karnataka State Civil services (Regulation of Transfer to Teachers) (Second Amendment) Act, 2021 in the manner as may be prescribed.

**XXX** **XXX** **XXX**

**SCHEDULE-I**
**(see section 2 and 16)**

| Sl. No. | Cadre of teachers |
|---|---|
| **I** | **Posts in Government Primary School or Pre-university** |
| 1 | Head master/Head mistress in Government Higher Primary School or Pre-university College |
| 2 | Senior Headmaster/Head mistress in Model higher primary School or Pre-university College / Higher Primary School or Pre-university College |
| 3 | Primary School or Pre-university College Assistant master/mistress consisting of the following categories .-<br>(i) Primary School or Pre-university College Teachers (for class 1 to 5)<br>(ii) Graduate Primary Teachers (for class 6 to 8) |
| 4 | Music teacher |
| 5 | Physical education teacher |
| 6 | Drawing Teacher in Government Higher primary School or Pre-university College /Model Higher primary School or Pre-university College / any other special teachers. |
| **II** | **Posts in Government High School or Pre-university College :** |
| 1 | Head Master/Head Mistress in Government High School or Pre-university College by whatever name called including Head Master/Mistress of Government Higher Secondary / Multipurpose High School or Pre-university College and Head Master/Head Mistress of Government High School or Pre-university College / Vice Principal of composite Pre-University college/ Karnataka Public<br>School or Pre-university College / Composite High School or Pre-university College consisting of the following categories of posts |
| 2 | Secondary School or Pre-university College assistant (Grade - I) |
| 3 | Secondary School or Pre-university College assistant (Grade – II) |
| 4 | Graduate Assistant Master/Mistress in Government High School or Pre-university College, composite Pre-University college, Composite High School or Pre-university College, consisting of the following categories of posts, namely:-<br>(i) Assistant Master Arts in Kannada, English, Urdu, Hindi, Marathi, Tamil and Telugu mediums of instruction; |

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



| | |
|---|---|
| | (ii) Assistant Master in Physical Science in Kannada, English, Urdu, Hindi, Marathi, Tamil and Telugu mediums of instruction;<br>(iii) Assistant Master in Biological Science in Kannada, English, Urdu, Hindi, Marathi, Tamil and Telugu mediums of instruction;<br>(iv) Language Assistant in Kannada, English, Urdu, Hindi,19 Marathi, Tamil, Telugu and Sanskrit languages. |
| 5 | Physical Education Teacher in Government High School or Pre-university College and Composite Pre-University Colleges |
| 6 | Drama Teacher |
| 7 | Dance Teacher |
| 8 | Drawing Teacher |
| 9 | Music Teacher |
| 10 | All Special Teachers |

**XXX** **XXX** **XXX**

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
THAMMAIAH